ನಿ-72
ಕ್ರ-161-ರಂಜಿಲ್ಲಾ

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ.ದೇವೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ</u>

ವಿಷಯ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವ ಪ್ರಾಥಮಿಕ, ಪ್ರೌಢಶಾಲಾ, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳು ಸುಸಜ್ಜಿತವಾದ ಕಟ್ಟಡವನ್ನು ಹೊಂದಿದ್ದು, ವಿದ್ಯಾರ್ಥಿಗಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಸರ್ಕಾರಿ ಮತ್ತು ಖಾಸಗಿ ಶಾಲಾ/ ಕಾಲೇಜುಗಳಿಗಿಂತ ಫಲಿತಾಂಶವು ಉತ್ತಮವಾಗಿದ್ದು, ಇದಕ್ಕೆ ಕಾರಣವಾದ ಶಿಕ್ಷಕರು/ಉಪನ್ಯಾಸಕರ ಪರಿಸ್ಥಿತಿ ಶೋಚನೀಯವಾಗಿರುತ್ತದೆ. ಡಾಕ್ಟರೇಟ್, ಎನ್.ಇ.ಟಿ. ಮತ್ತು ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಉಪನ್ಯಾಸಕರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಅತ್ಯಂತ ಕಡಿಮೆ ವೇತನವನ್ನು 3 ತಿಂಗಳಿಗೊಮ್ಮೆ ನೀಡಲಾಗುತ್ತಿದೆ, ಆದುದರಿಂದ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಇವರುಗಳಿಗೂ ನೀಡುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಉತ್ತರ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಶಾಲಾ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರು /ಉಪನ್ಯಾಸಕರು/ ಖಾಯಂಯೇತರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಕಾಲಕಾಲಕ್ಕೆ 11 ತಿಂಗಳ ಅವಧಿಗೆ ಸೀಮಿತಗೊಳಿಸಿ ಅರ್ಹ ಮಾನವ ಸಂಪನ್ಮೂಲ ಸರಬರಾಜು ಮಾಡುವ ಸಂಸ್ಥೆಗಳಿಂದ ಸಾರ್ವತ್ರಿಕ ಟೆಂಡರ್ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಸಂಸ್ಥೆಗಳಿಂದ ಪಡೆದು ಸರ್ಕಾರದ ಮತ್ತು ಬಿ.ಬಿ.ಎಂ.ಪಿ. ನಿಯಮಾವಳಿಗಳಂತೆ ಸೂಕ್ತ ವೇತನ ಮತ್ತು ಭತ್ಯೆಗಳನ್ನು ನಿಗಧಿಪಡಿಸಿ ಸೇವೆಯನ್ನು ಪಡೆಯುತ್ತಿರುವುದರಿಂದ ಸದರಿ ಶಿಕ್ಷಕರು ಮತ್ತು ಬೋಧಕ ಮತ್ತು ಬೋಧಕೇತರ ಸಿಬ್ಬಂಧಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳನ್ನು ನೇರವಾಗಿ ಸಂಬಂಧಪಟ್ಟ ಇಲಾಖೆಯವರು ನೇಮಕ ಮಾಡಿಕೊಂಡು 10 ತಿಂಗಳವರೆಗೆ ಕಾರ್ಯನಿರ್ವಹಿಸಿಕೊಂಡು ವೇತನ ನೀಡುತ್ತಿರುತ್ತಾರೆ. 10 ತಿಂಗಳ ನಂತರ ಸದರಿ ಅತಿಥಿ ಉಪನ್ಯಾಸಕರುಗಳನ್ನು ಕಾಲೇಜುಗಳಿಂದ ಬಿಡುಗಡೆಗೊಳಿಸಿ ನಂತರ ಮುಂದಿನ ಶೈಕ್ಷಣಿಕ ವರ್ಷಕ್ಕೆ ಅವಶ್ಯಕತೆಗನುಗುಣವಾಗಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.

ಪಾಲಿಕೆಯಲ್ಲಿ ಅರ್ಹ ಮಾನವ ಸಂಪನ್ಮೂಲ ಸರಬರಾಜು ಮಾಡುವ ಸಂಸ್ಥೆಗಳಿಂದ ಸಾರ್ವತ್ರಿಕ ಟೆಂಡರ್‌ನ್ನು ಆಹ್ವಾನಿಸುವುದರ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರು / ಉಪನ್ಯಾಸಕರುಗಳನ್ನು ಪಡೆದು 11 ತಿಂಗಳ ಅವಧಿಗೆ ಪ್ರತೀ ತಿಂಗಳು ಗೌರವಧನವನ್ನು ನೀಡಲಾಗುತ್ತಿದೆ.

ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರು / ಉಪನ್ಯಾಸಕರು ಸಿಬ್ಬಂದಿಗಳಿಗೆ ಅಕ್ಟೋಬರ್-2022ರ ಮಾಹೆಯವರೆಗೂ ಗೌರವಧನವನ್ನು ಪಾವತಿ ಮಾಡಲಾಗಿರುತ್ತದೆ ಹಾಗೂ ನವೆಂಬರ್- 2022ರ ಮಾಹೆಯ ಗೌರವಧನವನ್ನು ಪಾವತಿಸಲಾಗುತ್ತಿದೆ.

---

**ಸಂಖ್ಯೆ: ನಅಇ 605 ಎಂಎನ್‌ಯು 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ